ನಿಮಗಿಂತಲೂ ಗಡ್ಕರಿ ಮೇಲೇ ಅವರಿಗೆ ಒಲವು ಹೆಚ್ಚು ಇದ್ದಂಗಿದೆ.

ಮೋದಿ: ಹೈವೇ ಯೋಜನೆಯಲ್ಲಿ ಕರ್ನಾಟಕಕ್ಕೆ ಏಕೆ ಹೆಚ್ಚಿನ ದುಡ್ಡು ಅಂತ ನಾನು ಆಗ್ಲೇ ಕೇಳಿದೆ. ಇಲ್ಲದ ಕಥೆ ಹೇಳಿದ್ರು ಗಡ್ಕರಿ. ಗೌಡರ ಮಗ ರೇವಣ್ಣನವರೇ ಅಲ್ವೇ ಅಲ್ಲಿಯ ಪಿಡಬ್ಲ್ಯುಡಿ ಮಿನಿಸ್ಟರು?

ರಾಮ್ ಮಾಧವ್: ಹೌದು ಸಾರ್... ಗಂಡ ಸತ್ತು ಎರಡು ತಿಂಗಳಲ್ಲಿ ಏಕೆ ಬೇಕಿತ್ತು ರಾಜಕೀಯ ಅಂತ ಅಂಬರೀಷ್ ಅವರ ಪತ್ನಿ ಸುಮಲತಾ ಅವರನ್ನು ಇತ್ತೀಚೆಗೆ ಕೇಳಿದ್ರಲ್ಲ, ಅದೇ ರೇವಣ್ಣ ಅಲ್ಲಿನ ಪಿಡಬ್ಲ್ಯುಡಿ ಮಿನಿಸ್ಟರು.

ಮೋದಿ: ನಮಗೆ ತಿಳಿಯದಂತೆ ಸುತ್ತಲೂ ಏನೇನೋ ನಡೆಯುತ್ತಿದೆ ಅಮಿತ್‌ಜಿ. ನೀವೇನೋ ಎಲ್ಲಾ ಕಡೆ ನಮ್ಮ ಚೌಕಿದಾರರು ಇದ್ದಾರೆ ಎನ್ನುತ್ತೀರಿ. ನೋಡಿ, ಎಷ್ಟೋ ವಿಷಯ ನಮಗೆ ಗೊತ್ತಿಲ್ಲ. ಈಗೇನು ಮಾಡುತ್ತೀರಿ?

ಶಾ: ಸಾರ್, ಭೂಸಾರಿಗೆ ಇಲಾಖೆಯ ಹಗರಣಗಳನ್ನು ಒಂದಿಷ್ಟು ಹೊರಗೆ ಬಿಡೋಣವೇ?

ಮೋದಿ: ಯಾಕ್ರೀ ಅಮಿತ್‌ಜಿ ಹಿಂಗಾದ್ರಿ? ರಫೇಲ್ ದಾಳಿ ಸಾಕಾಗಿಲ್ವೆ? ಸುಮ್ಮನಿರದೆ ಇರುವೆ ಬಿಟ್ಟುಕೊಂಡರು ಎನ್ನುವಂತೆ ಇದನ್ನೇನಾದ್ರೂ ಮೈಮೇಲೆ ಎಳಕೊಂಡ್ರೆ ಮುಗೀತು.

ಶಾ: ಡಿಮಾನಿಟೈಜೇಷನ್‌ನಿಂದ ಪ್ರಾಬ್ಲಂ ಆಗಿರೋದು ನಿಜ ಅಂತ ನಮ್ಮ ಎಂ.ಪಿ.ಗಳೇ ಹೇಳುತ್ತಿದ್ದಾರೆ ಸಾರ್. ಕಿತ್ತಳೆ ಮಿಶ್ರಿತ ಹಳದಿ ಬಣ್ಣದ ನೋಟಿಗಿಂತ (500), ಗುಲಾಬಿ ಬಣ್ಣದ (2000) ನೋಟುಗಳನ್ನೇ ಕ್ಷೇತ್ರದ ಜನ ಕೇಳುತ್ತಿದ್ದಾರಂತೆ. ಚಿಲ್ಲರೆ ಸಮಸ್ಯೆಯಿಂದ ಚುನಾವಣೆ ಖರ್ಚು ಜಾಸ್ತಿಯಾಗುತ್ತಿದೆ ಎನ್ನುವುದು ಅವರ ದೂರು. ಮಾರವಾಡಿಗಳ ಸಿಟ್ಟೂ ಕಡಿಮೆಯಾದಂತಿಲ್ಲ.

ಮೋದಿ: ಉತ್ತರ ಪ್ರದೇಶ ಚುನಾವಣೆಗಿಂತ ಈಗಿನ ಚುನಾವಣೆಗೆ ಮುನ್ನ ಡಿಮಾನಿಟೈಜೇಷನ್ ಮಾಡಿದ್ದರೆ ಚೆನ್ನಾಗಿತ್ತೇನೋ...

ಶಾ: ಹೋಗಲಿ ಬಿಡಿ, ಈಗ ಎಲ್ಲಾ ಹುಳುಕು ಮುಚ್ಚಿ, ಮತ ತರುವಂತಹ ಬಿರುಗಾಳಿ ಎಬ್ಬಿಸೋದು ಹೇಗೆ?

ರಾಮ್ ಮಾಧವ್: ರಾಮಮಂದಿರದ ಟ್ರಂಪ್ ಕಾರ್ಡ್ ಮತ್ತೆ ಬಳಸೋಣವೇ?

ಮೋದಿ: ಛೇ, ಛೇ, ಈಗ ಆ ವಿಷಯ ಕೆದಕುವುದು ಬೇಡ. ಇಷ್ಟು ದಿನ ಏನು ಮಾಡಿದಿರಿ ಅಂತ ಜನ ಕೇಳಿದರೆ ಉತ್ತರ ನೀಡುವುದು ಕಷ್ಟ. ರಾಮಮಂದಿರ ಬೇಡ. ಬೀ ಮೋರ್ ಪ್ರ್ಯಾಕ್ಟಿಕಲ್. ನಾಳೆ ಬರುವಾಗ ಹೊಸ ಐಡಿಯಾಗಳೊಂದಿಗೆ ಬನ್ನಿ.

ಚರ್ಚೆ ಮುಗಿದು ಎಲ್ಲರೂ ಚದುರುವಾಗ ಹತ್ತಿರದ ಮಸೀದಿಯಿಂದ 'ಅಲ್ಲಾ ಹೋ ಅಕ್ಬರ್' ಎಂಬ ಆಜಾನ್ ಸದ್ದು ಮೊಳಗುತ್ತಿತ್ತು. ಚೌಕಿದಾರರ ಗಸ್ತು ಯಥಾಪ್ರಕಾರ ಮುಂದುವರಿದಿತ್ತು.

***

ಜನಪಥ್ ರಸ್ತೆಯ 10ನೇ ನಂಬರಿನ ನಿವಾಸ ಬುಧವಾರ, ಹೆಚ್ಚು–ಕಡಿಮೆ ಅದೇ ಮಧ್ಯರಾತ್ರಿ 'ಅಮ್ಮಾ ನಾ ಪಾಸಾದೆ, ಪ್ರಧಾನಿಪಟ್ಟದ ಪಾಲಾದೆ...' ಹಾಡು ಆ






ಮನೆಯಿಂದ ದಾರಿಹೋಕರಿಗೂ ಕೇಳುವಂತೆ ಅಲೆ–ಅಲೆಯಾಗಿ ಕೇಳಿಬರುತ್ತಿತ್ತು. ಮನೆಯ ಬಾಲ್ಕನಿಯಲ್ಲಿ ಕುಳಿತು ಆ ಹಾಡು ಹಾಡುತ್ತಿದ್ದ ರಾಹುಲ್ ಅವರನ್ನು ಸೋನಿಯಾ ಗದರಿ ಒಳಗೆ ಕರೆದೊಯ್ದರು.

ಸೋನಿಯಾ: ಈಗ ಎಲೆಕ್ಷನ್ ಘೋಷಣೆಯಾಗಿದೆ ಅಷ್ಟೇ ಕಣೋ. ರಿಸಲ್ಟ್ ಬರೋಕೆ ಮೇ 23ರವರೆಗೆ ಕಾಯ್ಬೇಕು ತಿಳೀತಾ? ನಿನ್ನ ಈ ಹಾಡು ಆಂಧ್ರ ಭವನ, ಬಂಗಾಳ ಭವನದವರೆಗೆ ಕೇಳಿದರೆ ಕಥೆ ಮುಗೀತು, ಸುಮ್ಮನೆ ಕೂತ್ಕೋ.

ರಾಹುಲ್: ಮೊನ್ನೆ ಗೌಡರು ಬೆಂಗಳೂರಿನಲ್ಲಿ ಹೇಳಿದ್ದಾರಮ್ಮ, ಪ್ರಧಾನಿ ಹುದ್ದೆಗೆ ನನ್ನ ಛಾಯ್ಸ್ ರಾಹುಲ್ ಅಂತ.

ಸೋನಿಯಾ: ಅದನ್ನೆಲ್ಲ ನೀನು ಕಣ್ಮುಚ್ಚಿಕೊಂಡು ನಂಬಿದೇನೋ? ಸಿದ್ದರಮಯ್ಯಾ ಅವರನ್ನು ಕೇಳಿನೋಡು, ಎಲ್ಲಾ ಬಿಡಿಸಿ ಹೇಳ್ತಾರೆ...

ರಾಹುಲ್ (ಮೊಬೈಲ್‌ನಲ್ಲಿ ಸಿದ್ದರಾಮಯ್ಯ ಅವರಿಗೆ): ಸಿದ್ದರಮಯ್ಯಾ, ಗೌಡರ ಸಪೋರ್ಟ್ ನಮಗಿದೆಯೇ?

ಸಿದ್ದರಾಮಯ್ಯ: ಆಯಪ್ಪನ ಸಪೋರ್ಟ್ ನಮಗಿಲ್ಲ ಸಾರ್. ನಮ್ಮ ಸಪೋರ್ಟ್‌ನಿಂದ ಅವ್ರ ಮಗ ಸಿಎಂ ಆಗಿರೋದು.

ರಾಹುಲ್: ಸಿಎಂ ಪೋಸ್ಟ್‌ಗೆ ಅಲ್ಲ ಕಣ್ರೀ. ಪಿಎಂ ಪೋಸ್ಟ್‌ಗೆ. ಅವ್ರ ಸಪೋರ್ಟ್ ಇದೆ ತಾನೇ?

ಸಿದ್ದರಾಮಯ್ಯ: ಪಿಎಂ ಪೋಸ್ಟ್‌ಗಾ? ನೀವು ಅವ್ರಿಗೆ ಸಪೋರ್ಟ್ ಕೊಡಬೇಡಿ. ನೀವು ಪಿಎಂ ಆಗಬೇಕು ಎನ್ನುವುದು ನಮ್ಮೆಲ್ಲರ ಹಂಬಲ.

ರಾಹುಲ್: ಅದ್ಕೇ ಕಣ್ರಿ. ಅವ್ರ ಸಪೋರ್ಟ್ ಸಿಗುತ್ತಾ?

ಸಿದ್ದರಾಮಯ್ಯ: ಆ ಅಪ್ಪ–ಮಕ್ಕಳು–ಮೊಮ್ಮಕ್ಕಳ ಪಾರ್ಟಿಯನ್ನು ನಂಬೋಕೆ ಆಗಲ್ಲ ಸಾರ್. ನನ್ನನ್ನ ಸಿಎಂ ಮಾಡ್ತೀನಿ ಅಂತ ಕೈಕೊಟ್ಟಿದ್ದಕ್ಕೆ ಅಲ್ವೆ ನಾನು ಕಾಂಗ್ರೆಸ್‌ಗೆ ಬಂದಿದ್ದು. ನಿಮ್ಗೆ ಅವ್ರು ಸಪೋರ್ಟ್ ಕೊಡದಿದ್ರೆ, ಅವ್ರ ಮಗನಿಗೆ ನಾವು ಕೊಟ್ಟ ಸಪೋರ್ಟ್ ವಾಪಸ್ ಪಡೆದ್ರೆ ಆಯ್ತು ಬಿಡಿ ಸಾರ್.

ಖುಷಿಯಿಂದ ಕರೆ ಸ್ಥಗಿತಗೊಳಿಸಿದ ರಾಹುಲ್ ಕೈಯಲ್ಲಿ ರಫೇಲ್ ವಿಮಾನದ ಪ್ರತಿಕೃತಿ ಹಿಡಿದು ಆಡಿಸುತ್ತಾ ಮತ್ತೆ ಹಾಡತೊಡಗಿದರು: 'ಅಮ್ಮಾ ನಾ ಪಾಸಾದೆ, ಪ್ರಧಾನಿಪಟ್ಟದ ಪಾಲಾದೆ...'

77ನೇ ಪುಟ ನೋಡಿ...

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್:
feedback@sudha.co.in